ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಹೌದು ವಿದ್ಯುತ್ ಸಂಪರ್ಕ ನೀಡಲು ಕ್ರಮ ತೆಗೆದುಕೊಳ್ಳಲಾಗಿದೆ ಹಳೇ ತಾಂಡಾಗಳನ್ನು ಈಗಾಗಲೇ ವಿದ್ಯುದೀಕರಿಸಲಾಗಿದೆ ಹೊಸದಾಗಿ ವಿಸ್ತರಣೆಗೊಂಡ 27 ಬಡಾವಣೆಗಳನ್ನು ಟರ್ನ್ ಕೀ ಆಧಾರದಲ್ಲಿ ವಿದ್ಯುದೀಕರಿಸಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ

ಆ) 41 ಹಳೇ ತಾಂಡಗಳಿಗೆ ಈವರೆಗೆ ವಿದ್ಯುತ್ ಸಂಪರ್ಕ ನೀಡಲಾಗಿದೆ ಹೊಸದಾಗಿ ವಿಸ್ತರಣೆಗೊಂಡ 27 ಬಡಾವಣೆಗಳಿಗೆ ಟರ್ನ್ ಕೀ ಆಧಾರದಲ್ಲಿ ವಿದ್ಯುದೀಕರಿಸಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ ಈ ಎಲ್ಲಾ ತಾಂಡಾಗಳನ್ನು ಡಿಸೆಂಬರ್ 2004ರ ಅಂತ್ಯದೊಳಗೆ ವಿದ್ಯುದೀಕರಣಗೊಳಿಸಲು ಉದ್ದೇಶಿಸಲಾಗಿದೆ

ಸೇಡಂ ತಾಲ್ಲೂಕಿನ ವಿದ್ಯುತ್ ಪ್ರಸರಣ ನಿಗಮದಲ್ಲಿ ಸುಟ್ಟು ಹೋದ ಟಿ ಸಿ ಗಳ ದುರಸ್ತಿಯ ಬಗ್ಗೆ

06 (114) ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗ ಜಿಲ್ಲೆಯ ಸೇಡಂ ತಾಲ್ಲೂಕಿನಲ್ಲಿ ವಿದ್ಯುತ್ ಪ್ರಸರಣ ನಿಗಮದವರು ಟ್ರಾನ್ಸ್‌ಫಾರ್ಮರ್‌ಗಳು (ಟಿ ಸಿ) ಸುಟ್ಟು ಹೋದರೆ ಅಥವಾ ಕೆಟ್ಟು ಹೋದರೆ ಇವುಗಳನ್ನು ದುರಸ್ತಿ ಮಾಡುವ ಅಥವಾ ಬೇರೆ ಟಿ ಸಿ.ಗಳನ್ನು ಅಳವಡಿಸಲು ಬೇಕಾಗಿರುವ ಕಾಲಾವಕಾಶ ಎಷ್ಟು

ಆ) ಮೂರು ತಿಂಗಳವರೆಗೆ ಕೆಟ್ಟು ಹೋದರೆ ಟಿ ಸಿ.ಗಳನ್ನು ಅಳವಡಿಸೇ ದುರಸ್ತಿ ಮಾಡದೇ ಅಥವಾ ಹೊಸ ಟಿ ಸಿ ಗಳನ್ನು ಕೂಡಿಸದೇ ಇರುವುದರಿಂದ ರೈತರ ಪಂಪು ಸೆಟ್ಟುಗಳಿಗೆ ವಿದ್ಯುಚ್ಛಕ್ತಿಯ ಸರಬರಾಜು ಇಲ್ಲದೇ ಬೆಳೆಗಳು ನಾಶವಾಗಿ ರೈತರಿಗೆ ನಷ್ಟವಾಗುವುದಿಲ್ಲವೇ.

ಇ) ಇಲ್ಲಿಯವರೆವಿಗೂ ಸೇಡಂ ತಾಲ್ಲೂಕಿನಲ್ಲಿ ಟಿ ಸಿ ಗಳು ಸುಟ್ಟು ಹೋಗಿರುವುದರಿಂದ ಗ್ರಾಮಗಳು ಕತ್ತಲಾಗಿರುವುದು ಎಷ್ಟು ವಿದ್ಯುತ್ ಇಲ್ಲದೇ ಮೋಟಾರುಗಳು ನಡೆಯದೇ ರೈತರು ನಷ್ಟವಾಗಿರುವ ಗ್ರಾಮಗಳು ಯಾವುವು

ಈ) ರೈತರ ಬೆಳೆಯು ನಷ್ಟವಾದರೆ ವಿದ್ಯುತ್ ಪ್ರಸರಣ ನಿಗಮದವರಿಂದ ಇದರ ನಷ್ಟ ಕೊಡಿಸುವ ವ್ಯವಸ್ಥೆ ಮಾಡುವುದು ಯಾವಾಗ?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಈ ಹಿಂದೆ ಗ್ರಾಮಾಂತರ ಭಾಗದಲ್ಲಿ ಒಂದು ವಾರದ ಅವಧಿಯೊಳಗೆ ಸುಟ್ಟುಹೋದ ಪರಿವರ್ತಕಗಳನ್ನು ಬದಲಾಯಿಸಲು ಆದೇಶ ನೀಡಲಾಗಿತ್ತು ಆದರೆ ಇತ್ತೀಚೆಗೆ 72 ಗಂಟೆಗಳಲ್ಲಿ ಸುಟ್ಟು ಹೋಗಿರುವ ಪರಿವರ್ತಕಗಳನ್ನು ಬದಲಾಯಿಸಲು ಆದೇಶ ನೀಡಲಾಗಿದೆ

ಆ) ಇಂತಹ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಇ) ಸುಟ್ಟು ಹೋದ ಬಹುತೇಕ ಟ್ರಾನ್ಸ್‌ಫಾರ್ಮರ್‌ಗಳನ್ನು ಆದಷ್ಟು ಶೀಘ್ರವಾಗಿ ಮೇಲೆ ನಮೂದಿಸಿರುವ ಅವಧಿಯೊಳಗೆ ಬದಲಾಯಿಸಲಾಗಿದೆ ವಿದ್ಯುತ್ ಇಲ್ಲದೇ ಮೋಟಾರುಗಳು ನಡೆಯದೇ ಇರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ

ಈ) ಸಾಧ್ಯವಾಗಲಾರದು